



**ಸುರಂಗದೊಳಗಿನ ರೂಪುರೇಷೆ**
(ಆಧಾರ: ಪೀಪಲ್ಸ್ ಆರ್ಮಿ ಆಫ್ ವಿಯೆಟ್ನಾಂ ಮತ್ತು ಅಮೆರಿಕ ಸೇನಾ ದಾಖಲೆ)

ಸೈಗಾನ್ ಅಧ್ಯಕ್ಷ ದುವಾಂಗ್ ವಾನ್ ಮಿನ್ ಅವರು ಮಂತ್ರಿ ಪರಿಷತ್ತಿನ ಸಭೆ ನಡೆಸುತ್ತಿದ್ದರು. ಆ ಸಭೆಯಲ್ಲಿಯೇ, ದಕ್ಷಿಣ ವಿಯೆಟ್ನಾಂ ಸರ್ಕಾರವನ್ನು ಎಲ್ಲ ಹಂತಗಳಲ್ಲೂ ವಿಸರ್ಜಿಸಿ ಉತ್ತರ ವಿಯೆಟ್ನಾಂಗೆ ಶರಣಾಗುತ್ತಿರುವುದಾಗಿ ನಿರ್ಣಯ ಕೈಗೊಳ್ಳಲಾಯಿತು. ದುವಾಂಗ್ ವಾನ್ ಮಿನ್ ಅವರೇ ರೇಡಿಯೊ ಮೂಲಕ ಈ ಸಂಬಂಧ ಪ್ರಕಟಣೆ ನೀಡಿದರು. ಬಳಿಕ ರಕ್ತಪಾತಕ್ಕೆ ಅವಕಾಶ ನೀಡದ ಉತ್ತರ ವಿಯೆಟ್ನಾಂ ಸರ್ಕಾರವು ವಿಯೆಟ್ನಾಂ ಮತ್ತೆ ಏಕೀಕರಣಗೊಂಡಿದೆ ಎಂದು ಘೋಷಿಸಿ, ದಕ್ಷಿಣ ವಿಯೆಟ್ನಾಂ ಭಾಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಹೌದು, ವಿಯೆಟ್ನಾಂನ ಸುದೀರ್ಘ ಯುದ್ಧ ಇತಿಹಾಸಕ್ಕೆ ತೆರೆಬಿದ್ದ ಅಮೃತ ಕ್ಷಣ ಅದಾಗಿತ್ತು. ಅಖಂಡ ವಿಯೆಟ್ನಾಂನ ಕನಸು ಕಂಡಿದ್ದ ಹೋ ಚಿ ಮಿನ್ ಆ ವೇಳೆಗೆ ಅಸುನೀಗಿದ್ದರು. ಯುದ್ಧ ತೆರೆಬಿದ್ದ ಮಾರನೇ ದಿನ ಇಂಗ್ಲಿಷ್ ಪತ್ರಿಕೆಯೊಂದು ಹೀಗೆ ವರದಿ ಮಾಡಿತ್ತು: 'ಬದುಕಿಯೇ ಇರದ ವ್ಯಕ್ತಿಯ (ಹೋ ಚಿ ಮಿನ್) ನೇತೃತ್ವದಲ್ಲಿ ವಿಯೆಟ್ನಾಂ ಇಂದು ಗೆಲುವು ಪಡೆದು, ನಗೆ ಬೀರಿತು'!

ಕೊನೆಯದಾಗಿ, ನಾವು ಭೇಟಿ ನೀಡಿದ್ದು, ಯುದ್ಧ ಅವಶೇಷಗಳ ಮ್ಯೂಸಿಯಂಗೆ. ಹೋ ಚಿ ಮಿನ್ ಸಿಟಿಗೆ ಬಂದವರು ಈ ಮ್ಯೂಸಿಯಂಗೆ ಭೇಟಿ ನೀಡದೆ ಹೋದರೆ ಅವರ ಪ್ರವಾಸ ಅಪೂರ್ಣ ಎಂದೇ ಹೇಳಬೇಕು. ವಿಯೆಟ್ನಾಮೀಸ್ ಭಾಷೆಯಲ್ಲಿ ಇದಕ್ಕೆ 'ಬಾವೊ ತಾಂಗ್ ಚುಂಗ್ ಟಿಚ್ ಚೈನ್ ತ್ರಾನ್' ಎನ್ನುವರು. ಅಮೆರಿಕ ಮತ್ತು ಅದರ ಕೈಗೊಂಬೆಯಾಗಿದ್ದ ಸೇನೆಯ ಯುದ್ಧಾಪರಾಧದ ಕಥೆಗಳನ್ನು ಈ ಮ್ಯೂಸಿಯಂ ವಿವರವಾಗಿ ಹೇಳುತ್ತಾ ಹೋಗುತ್ತದೆ. ಯುದ್ಧದಲ್ಲಿ ಬಳಕೆಯಾದ ವಿಮಾನಗಳು, ಹೆಲಿಕಾಪ್ಟರ್‌ಗಳು, ಟ್ಯಾಂಕರ್‌ಗಳು, ಲಾಂಚರ್‌ಗಳು, ಸೆಲ್‌ಗಳು, ಗನ್‌ಗಳು ಮತ್ತು ಬಾಂಬರ್‌ಗಳನ್ನು ಮ್ಯೂಸಿಯಂನ ಆವರಣದಲ್ಲಿ ಪ್ರದರ್ಶನಕ್ಕಿಡಲಾಗಿದೆ. ರಾಜಕೀಯ ಕೈದಿಗಳನ್ನು ಎಷ್ಟೊಂದು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿತ್ತು ಎಂಬುದನ್ನು ತೋರಿಸಲು ಪ್ರಸಿದ್ಧ 'ಟೈಗರ್ ಕೇಜ್'ನ ಪ್ರತಿಕೃತಿಯನ್ನು ಇಲ್ಲಿ ನಿರ್ಮಿಸಲಾಗಿದೆ. ವಿಯೆಟ್ನಾಂ ಯುದ್ಧದ ಕಾಲದಲ್ಲಿ 133 ಛಾಯಾಗ್ರಾಹಕರು ಸಕ್ರಿಯರಾಗಿದ್ದರು. ಅವರು ಯುದ್ಧಭೂಮಿಯಿಂದ ತೆಗೆದುಕೊಟ್ಟ ನೂರಾರು ಚಿತ್ರಗಳು ಇಲ್ಲಿ ಪ್ರದರ್ಶನಕ್ಕಿದ್ದು, ಕ್ರೌರ್ಯದ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತವೆ. ಅಮೆರಿಕದ ಸೇನೆ ನಡೆಸಿದ ವಿಯೆಟ್ನಾಂ ಜನರ ಸಾಮೂಹಿಕ ಹತ್ಯಾಕಾಂಡದ ಚಿತ್ರಗಳನ್ನು ಕಂಡಾಗ ಕಣ್ಣಾಲಿಗಳು ತುಂಬಿಕೊಳ್ಳುತ್ತವೆ. 'ಐತಿಹಾಸಿಕ ಸತ್ಯಗಳು', 'ವಿಯೆಟ್ನಾಂ– ಯುದ್ಧ ಮತ್ತು ಶಾಂತಿ', 'ಯುದ್ಧ ಕ್ರೌರ್ಯ', 'ಶೋಕಗೀತೆ', 'ಏಜೆಂಟ್ ಆರೆಂಜ್ ಅನಾಹುತ'... ಹೀಗೆ ವಿವಿಧ ವಿಭಾಗಗಳಲ್ಲಿ ಯುದ್ಧದ ನಾನಾ ಮುಖಗಳ ಅನಾವರಣವನ್ನು ಮಾಡಲಾಗಿದೆ.

ಲೀ ವಾನ್ ತ್ರಿ ಎಂಬ ಯುವಕನ ಚಿತ್ರವೊಂದು ಇಲ್ಲಿನ ಪ್ರದರ್ಶನದಲ್ಲಿದೆ. ಹತ್ತು ವರ್ಷಗಳವರೆಗೆ ಜೈಲಿನಲ್ಲಿದ್ದ ಆ ಯುವಕನ ದೇಹದಲ್ಲಿ ಎಲುಬಿನ ಹಂದರ ಮಾತ್ರ ಉಳಿದಿದೆ. ಆಹಾರ ಮತ್ತು ಔಷಧಿ ನೀಡದ ಕಾರಣ ನೂರಾರು ವಿಯೆಟ್ನಾಂ ಜನ ಪಾರ್ಶ್ವವಾಯು ಪೀಡಿತರಾಗಿ ತೆವಳಿಕೊಂಡು ಹೋಗುತ್ತಿದ್ದಾರೆ. ಅಮೆರಿಕದಿಂದ ನಿರಂತರವಾಗಿ ಆಗುತ್ತಿದ್ದ ಬಾಂಬ್ ದಾಳಿಯಿಂದ ಭೀತಿಗೊಂಡ ಮಹಿಳೆಯೊಬ್ಬರು ತಮ್ಮ ನಾಲ್ವರು ಮಕ್ಕಳೊಂದಿಗೆ ನದಿ ದಾಟಲು ಹರಸಾಹಸ ಪಡುತ್ತಿದ್ದಾರೆ. ಅಮ್ಮನ ತೆಕ್ಕೆಯಲ್ಲಿದ್ದ ಕಂದಮ್ಮ ಮಲಗಿದ ಸ್ಥಳದಲ್ಲೇ ಅಮ್ಮನೊಂದಿಗೇ ಕಣ್ಮುಚ್ಚಿದೆ. ಇಲ್ಲಿನ ಈ ನೋಟಗಳು ಹೃದಯ ಹಿಂಡುತ್ತವೆ. ಅಸಂಖ್ಯ ಅತ್ಯಾಚಾರದ ನೋವು, ಸಂಕಟಗಳು ಮಣ್ಣಿನೊಳಗೆ ಮಣ್ಣಾಗಿ ಧ್ವನಿ ಕಳೆದುಕೊಂಡಿವೆ. ಯುದ್ಧದ ಭೀಕರತೆ ಎಷ್ಟಿತ್ತು ಎಂಬುದಕ್ಕೆ ಇನ್ನೂ ಸಾಕ್ಷ್ಯ ಬೇಕೇ? ಮ್ಯೂಸಿಯಂನಲ್ಲಿ ಇರುವ ಈ ವಿವರದ ಮೇಲೊಮ್ಮೆ ಕಣ್ಣಾಡಿಸಿ: 'ವಿಯೆಟ್ನಾಂನ 30 ಲಕ್ಷ ಮಂದಿ ಪ್ರಾಣ ಕಳೆದುಕೊಂಡರು, ಅದರಲ್ಲಿ 20 ಲಕ್ಷಕ್ಕೂ ಅಧಿಕ ಮಂದಿ ಮುಗ್ಧರು. ಅಮೆರಿಕದ 58,220 ಸೈನಿಕರೂ ಸಾವಿಗೀಡಾದರು'.

ಕಾಲದ ಚಕ್ರ ತಿರುಗಿದೆ. ಸೈಗಾನ್ ನದಿಯಲ್ಲಿ ಹಲವು ಮಳೆಗಾಲಗಳ ನೀರು ಹರಿದಿದೆ. ರಕ್ತದ ಕಲೆಗಳನ್ನು ಮರೆಸುವಂತೆ ವಿಯೆಟ್ನಾಂನಲ್ಲಿ ಹಸಿರು ಮುಕ್ಕಳಿಸುತ್ತಿದೆ. ಈಗ ವಿಯೆಟ್ನಾಂ–ಅಮೆರಿಕ ಸ್ನೇಹದ ಹಸ್ತಲಾಘವ ಮಾಡಿವೆ ಕೂಡ. ಐವತ್ತು ವರ್ಷಗಳಲ್ಲಿ ವಿಯೆಟ್ನಾಂ ಹೇಗೆ ಫೀನಿಕ್ಸ್‌ನಂತೆ ಎದ್ದು ಬಂದಿದೆ ಎಂಬುದನ್ನು ನೋಡಲು ಭಾರತವೂ ಸೇರಿದಂತೆ ಜಗತ್ತಿನ ಜನ ಹೋ ಚಿ ಮಿನ್ ಸಿಟಿಗೊಮ್ಮೆ ಭೇಟಿ ನೀಡಬೇಕು.